ನನ್ನ ಬದುಕಿನ ಬಹುತೇಕ ಸಂಪೂರ್ಣ ಕಾಲವನ್ನು ಈ ಕೇಂದ್ರದಲ್ಲಿ ಇದ್ದು ಅನುಭವಿಸಿದ್ದೇನೆ. ನಾನು ಬಹುಶಃ ದೀಡೆರಡು ವರ್ಷದವನಿದ್ದೆ, ಆಗ ಒಂದು ದಲಾಲಿ ಅಂಗಡಿಯಲ್ಲಿ ಲೆಕ್ಕ ಬರೆಯುತ್ತಿದ್ದ, 26–27ರ ವಯಸ್ಸಿನ ಅಪ್ಪ ಧಾರವಾಡದ ಬಾಳೀಕಾಯಿಓಣಿಯ ಮನೆಯಲ್ಲಿ ತೀರಿಕೊಂಡ. ನಿರ್ಗತಿಕಳಾದ ಅವ್ವ ಅನಿವಾರ್ಯವಾಗಿ ತವರುಮನೆ ಯಾದವಾಡ ಸೇರಿದಳು. ಅದು ಬೆಳವಲ. ಅಲ್ಲಿಯೂ ಬಡತನ, ಕೂಲಿ ಕೆಲಸ. 2–3 ವರ್ಷ ಅಲ್ಲಿದ್ದು, ಅವ್ವ ನಾನು ಮನಗುಂಡಿಗೆ ಬಂದೆವು. ಇದು ಮಲೆನಾಡು. ಇಲ್ಲಿ ಅವ್ವನ ಕಾಕಾ ಸ್ವಲ್ಪ ಅನುಕೂಲಸ್ಥನಾಗಿದ್ದ. ಲಾವಣಿ, ಕೋರು ಹಿಡಿದ ಹೊಲ, ಮನೆಯಲ್ಲಿ ಆಳುಕಾಳು, ಆಕಳ ಎತ್ತು ಎಮ್ಮೆ, ಚಾದಂಗಡಿ ಇಟ್ಟುಕೊಂಡಿದ್ದ. ನನ್ನ ಆತ್ಮಕಥೆ "ಗಿರಿಜವ್ವನ ಮಗ"ದಲ್ಲಿ ಇದೆಲ್ಲ ವಿವರ ಇದೆ. ಸಣಬಿನ್ನೇತ್ತ, ದೊಡಬಿನ್ನೇತ್ತ ಮುಗಿಸಿ ಐದನೇತ್ತದ ವರೆಗೆ ಮನಗುಂಡಿ ಶಾಲೆಯಲ್ಲಿ ಕಲಿತೆ. ಮನಗುಂಡಿಯಿಂದ ಬಹಳಷ್ಟು ಪಡಕೊಂಡಿದ್ದೇನೆ. ಆರನೇತ್ತ ಕಲಿಯಲು 1951ರಲ್ಲಿ ಮತ್ತೆ ಧಾರವಾಡಕ್ಕೆ ಬಂದೆವು. ಅಪ್ಪನನ್ನು ಕಳೆದುಕೊಂಡಿದ್ದ ಅದೇ ಮನೆಯ ಎದುರಿನ ಕೋಣೆ ಬಾಡಿಗೆ ಹಿಡಿದೆವು. ಮೊದಲಿನಿಂದಲೂ ಅವ್ವ ನನ್ನನ್ನು ರೂಪಿಸಿದ ದೈವ.

ಈ 70 ವರ್ಷ ಧಾರವಾಡವನ್ನು ಅನೇಕ ಮಗ್ಗುಲಗಳಿಂದ ನೋಡುತ್ತ ಬಂದಿದ್ದೇನೆ. ಆಗ ಇಡೀ ಊರಿನಲ್ಲಿ ಎರಡು ದಿನ ಸಂತೆ ಸೇರುತ್ತಿತ್ತು, ಮಂಗಳವಾರ, ರವಿವಾರ. ಮಂಗಳವಾರದ ಮುಖ್ಯ ಸಂತೆಯಲ್ಲಿ ಅಕ್ಕಿಪೇಟೆ, ಎಲೆಪೇಟೆ, ಕಾಯಿಪಲ್ಲೆ, ಬೆಣ್ಣೆ, ಬಳೆ, ತೆಂಗಿನಕಾಯಿ, ಹೂ, ಕುಂಕುಮ, ಕಿರಾಣಿ, ದಲಾಲಿ, ದನದಪೇಟೆ ಹೀಗೆ ಅಕ್ಕಪಕ್ಕ ಎಲ್ಲವೂ ಇದ್ದುವು. ಸಾಲಿ ರಾಮಚಂದ್ರರಾವ, ವರದರಾಜ ಹುಯಿಲಗೋಳ, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಹುಕ್ಕೇರಿ ಬಾಳಪ್ಪ, ಎನ್ಕೆ ಕುಲಕರ್ಣಿ, ಮನಸೂರ ಮಲ್ಲೇಶಪ್ಪ, ಶಂ.ಬಾ. ಜೋಶಿ ಮುಂತಾದವರು ಕೈಚೀಲ ಹಿಡಿದುಕೊಂಡು, ಚೌಕಾಶಿ ಮಾಡುತ್ತ, ಪೇಟೆಯಲ್ಲಿ ಸುತ್ತಾಡುವುದನ್ನು ನೋಡಿದ್ದೇನೆ. ಅಂಥ ಅನೇಕ ಹಿರಿಯರ ವ್ಯಾಖ್ಯಾನಗಳನ್ನು ಆಲಿಸಿದ್ದೇನೆ. ಹಲವು ಸಲ ಅವರೊಡನೆ ಅಭಿಮಾನದಿಂದ ಪಾಲುಗೊಂಡಿದ್ದೇನೆ.

ನಾನು ಕಲಿಯುತ್ತಿದ್ದ ಪ್ರ್ಯಾಕ್ಟಿಸಿಂಗ್ ಸ್ಕೂಲಿನದೇ ಪಕ್ಕದ ಕಟ್ಟಡದಲ್ಲಿ ಆಗಷ್ಟೆ ಕರ್ನಾಟಕ ವಿವಿ ಆರಂಭವಾಗಿತ್ತು. ಅದರಾಚೆ ಸವಣೂರ ನವಾಬರ ಬಂಗಲೆಯಲ್ಲಿ ಆಕಾಶವಾಣಿ ಶುರುವಾಗಿತ್ತು. ಇಡೀ ಊರಿನ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿದ್ಯಾವರ್ಧಕ ಸಂಘ ಇತ್ತು, ಅಲ್ಲಿದ್ದ ಶಾಂತೇಶ ವಾಚನಾಲಯದಲ್ಲಿ ಸ್ಥಳ ಸಿಗದೇ ನಿಂತುಕೊಂಡೇ ಓದುತ್ತಿದ್ದೆವು. ದತ್ತಾತ್ರೇಯ ಗುಡಿಯ ಹಿಂದೆ ವಿಶಾಲ ಹಾಲಗೆರೆ, ಈಚೆ ಲೈನ್ ಬಜಾರ ಕಡೆ ಕೆಂಪಗೆರೆ, ಮೇಲ್ಗಡೆಗೆ ಎಮ್ಮಿಕೆರೆ, ಅತ್ತ ಅತ್ತಿಕೊಳ್ಳ, ಇತ್ತ ಕೊಪ್ಪದಕೆರೆ ಹೀಗೆ ಊರ ತುಂಬ 7–8 ಕೆರೆಗಳು, ಗುಡ್ಡಗಳು. ಉಳವಿ ಬಸಪ್ಪನ ಗುಡಿ, ಶ್ರಾವಣ ಜಾತ್ರೆಗಳು, ಲಕ್ಷ್ಮೀನಾರಾಯಣಗುಡಿ ಜಾತ್ರೆ, ಊರಾಚೆಗಿನ ಸೋಮೇಶ್ವರ ಜಾತ್ರೆ, ಇಡೀ ಊರಿನಲ್ಲಿ 1 ನಗರಸಭೆ, 3 ಸಿನೆಮಾ ಟಾಕೀಜು, 3 ಖಾನಾವಳಿ; 2 ಬಿಲ್ಲಿ ಚಾದಂಗಡಿ, ಬಾಂಬೆ ರೆಸ್ಟೋರೆಂಟ್ , ಮಥುರಾ ರೆಸ್ಟೋರೆಂಟ್ ಮುಂತಾದ 78 ಚಾದಂಗಡಿ; 56 ಹಜಾಮತಿ ಅಂಗಡಿ, 2–3 ಖಾಸಗಿ ದವಾಖಾನೆ, 1 ಸರಕಾರಿ ಸಿವಿಲ್ ದವಾಖಾನೆ, 6–7 ಬಂಗಾರದAಗಡಿ, 3–4 ಬಟ್ಟೆಯಂಗಡಿ, 2 ಔಷಧದಂಗಡಿ, 5–6 ಶಾಲೆ, ಹಾಲಭಾವಿಯವರ 1 ಚಿತ್ರಶಾಲೆ, 2 ವ್ಯಾಯಾಮಶಾಲೆ, 2 ಕಾಲೇಜು, 4 ಪುಸ್ತಕದಂಗಡಿ, 1 ನ್ಯಾಯಾಲಯ, 1 ಡಿಎಸ್‌ಪಿ ಆಫೀಸು, ಜೇಲು, ಬರ್ಫದ ಕಾರಖಾನೆ, ಯಾವಾಗಾರ ಒಮ್ಮೊಮ್ಮೆ ಬರುತ್ತಿದ್ದ ಕಂಪನಿ ನಾಟಕ, ಸರ್ಕಸ್ ಇದ್ದುವು.

ಈಗ? ಆಗಿನ ಊರು, ಓಣಿ, ಮಂದಿ, ಮಾತು, ನಡತೆ ಒಂದೂ ಈಗ ಉಳಿದಿಲ್ಲ. ಈಗ ಚಕ್ಕಡಿ, ಟಾಂಗಾಗಳಿಲ್ಲ; ಊರ ತುಂಬ ಬಂದು ಕಾಳುಕಡಿ, ಕಾಯಿಪಲ್ಲೆ ಮಾರುವವರಿಲ್ಲ, ಜಾದೂ ದೊಂಬರಾಟಗಳಿಲ್ಲ, ಬಂಬಯಿ ದೇಖೊ ಇಲ್ಲ, ಸಿನಿಮಾ ಕರಪತ್ರ ಹಂಚುವ ಕೂಗಿ ಹೇಳುವ ಮೈಕ್,